**ಎಮ್.ವಿ.ಸಿ. ನಂಃ 170/2025**
**ಪಿ.ಡಬ್ಲ್ಯೂಃ 1,**

**ದಿನಾಂಕ : 30-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ.ಎಸ್. ಎಸ್. ಎ. ಎದುರುದಾರ ಪರ ವಕೀಲರಿಂದ :**

ನಾನು ಮತ್ತು ನನ್ನ ಮೈದುನ, ಸದ್ದಾಂ ಹುಸೇನ ವಾಡಿ ಇಂದ ಕರದಾಳಕ್ಕೆ ಬೈಕ ಮೇಲೆ ಹೊರಡಿದ್ದೇವು, ನಂತರ ಸದ್ದಾಂ ಹುಸೇನ ಇತನು ಬೈಕನ್ನು ಅತೀತ ವೇಗ ಮತ್ತು ನಿಷ್ಕಾಳಜಿತನ ಚಲಾಯಿಸುತ್ತಿದ ಕಾರಣ ಅಪಘಾತ ಆಯಿತು. ದೂರನ್ನು ನಾನೇ ಸಲ್ಲಿಸಿದ್ದೇನೆ. ನಾನು ಹಿಂಬದಿ ಸವಾರ ಇದ್ದೇನು. ನನ್ನನ್ನು ಮನೂರ ಆಸ್ಪತ್ರಗೆ ದಾಖಲಿಸಿದರು. ನನ್ನ ಎಡಗಾಲಿಗೆ ಗಾಯ ಆಯಿತು. ಸದರಿ ಮನೂರ ಆಸ್ಪತ್ರಯಲ್ಲಿ 7 ದಿನ ದಾಖಲ ಇದ್ದೆ, ನನಗೆ ಶಸ್ತ್ರ ಚಿಕಿತ್ಸೆಗೆ ಆಗಿ ರಾಡ ಹಾಕಿದ್ದಾರೆ ಇನ್ನು ತೆಗೆದಿಲ್ಲಾ, ಡಿಸಚಾರ್ಜ ಆದ ಮೇಲೆ ಮುಂದುವರೆದ ಚಿಕಿತ್ಸೆ ಪಡೆದಿದ್ದೇನೆ ಅದರೆ ದಾಖಲೆ ಸಲ್ಲಿಸಿಲ್ಲಾ, ನಾನು ಗುಣಮುಖವಾಗಿ ಮೊದಲಿನಂತೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನಡೆಯಲು ಮತ್ತು ಕೆಲಸ ಮಾಡಲು ಆಗುತ್ತಿಲ್ಲಾ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಹೆಚ್ಚಿನ ಪರಿಹಾರ ಪಡೆಯಲು ವೈದ್ಯರಿಂದ ಸುಳ್ಳು ಅಂಗ ನೂನ್ಯತೆ ಪ್ರಮಾಣ ಪತ್ರ ಪಡೆದು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರಕ್ಕೆ ಯಾವುದೇ ಆಧಾರ ಇಲ್ಲಾ ಎಂದರೆ ಸರಿಯಲ್ಲ . ನಾನು ಅಪಘಾತಕ್ಕಿಂತ ಮುಂಚೆ ರೂ.20,000/- ಸಂಪಾದಿಸುತ್ತಿದ್ದೆ ಮತ್ತು ನನಗೆ 42 ವರ್ಷ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಬೈಕ ಸದ್ದಾಂ ಹುಸೇನ ಮಗಳ ಗಂಡನ ಬೈಕ ಆಗಿರುತ್ತದೆ. ಸದರಿ ಅಪಘಾತ ಪಡಿಸಿದ ವಾಹನಕ್ಕೆ

**ಎಮ್.ವಿ.ಸಿ. ನಂಃ 170/2025**
**ಪಿ.ಡಬ್ಲ್ಯೂಃ 1,**

ಹಿಂಬದಿ ಸವಾರರಿಗೆ ಹೆಚ್ಚಿನ ಪ್ರಿಮಿಯಮ್ ಭರಿಸದ ಕಾರಣ 2ನೇ ಎದುರುದಾರ ಪರಿಹಾರ ನೀಡಲು ಭಾಧ್ಯಸ್ಥರು ಅಲ್ಲಾ ಎಂದರೆ ಸರಿಯಲ್ಲ. ನನಗೆ ರೂ.3,00,000/- ಖರ್ಚು ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**